ಶ್ರೀ ಎಂ. ವೀರಪ್ಪಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :– ಸನ್ಮಾನ್ಯ ಉಪಾಧ್ಯಕ್ಷಣಿಯವರೆ, ದಿನಾಂಕ 28–11–1990ರಂದು ಪ್ರಶ್ನೋತ್ತರ ವೇಳೆ ನಡೆಯದಿದ್ದ ಕಾರಣ ಸದನದಲ್ಲಿ ಉತ್ತರಿಸುವ ಪ್ರಶ್ನೆಗಳ 8ನೇ ಪಟ್ಟಿಯನ್ನು ಮತ್ತು ಲಿಖಿತ ಮೂಲಕ ಉತ್ತರಿಸುವ 8ನೇ ಪಟ್ಟಿಯನ್ನು ಹಾಗೂ 29–11–1990ರ 9ನೇ ಪಟ್ಟಿಯ ಚುಕ್ಕೆ ಗುರುತಿಲ್ಲದ ಪ್ರಶ್ನೋತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಹಾವೇರಿ ನಗರವನ್ನು ಜಿಲ್ಲಾ ಕೇಂದ್ರವನ್ನಾಗಿ ಪರಿಗಣಿಸುವ ಬಗ್ಗೆ

571 ಶ್ರೀ ಮಂಜುನಾಥ ಚನ್ನಪ್ಪ ಕುನ್ನೂರ (ಶಿಗ್ಗಾಂವ) :– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾವೇರಿ ನಗರವನ್ನು ಜಿಲ್ಲಾ ಕೇಂದ್ರವನ್ನಾಗಿ ಪರಿಗಣಿಸುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಇನ್ನು ಎಷ್ಟು ದಿವಸಗಳಲ್ಲಿ ಪ್ರಾರಂಭ ಮಾಡಲಾಗುವುದು?

ಇ) ಹಾಗಿಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) :–

ಅ) ಹೌದು.

ಆ) ಈ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ. ಆದಷ್ಟು ಶೀಘ್ರವಾಗಿ ಪ್ರಾರಂಭಿಸಲು ಕ್ರಮ ತೆಗೆದುಕೊಳ್ಳಲಾಗುವುದು.

ಇ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶಿಗ್ಗಾಂವ ತಾಲ್ಲೂಕು ಶಹಬಜಾರ್, ಅಂಕದಕಣ, ಕೊಟ್ಟಗೇರಿ ಗ್ರಾಮಗಳನ್ನು ಬಂಕಾಪುರ ಎಂದು ಬದಲಾಯಿಸುವ ಬಗ್ಗೆ

570 ಶ್ರೀ ಎಂ.ಸಿ. ಕನ್ನೂರ್ (ಶಿಗ್ಗಾಂವ) :– ಮಾನ್ಯ ಕಂದಾಯ ಸಚಿವರು ಈ ಕೆಳಂಕಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿಗ್ಗಾಂವ ತಾಲ್ಲೂಕ, ಶಹಾಬಜಾರ್ ಅಂಕದಕಣ, ಕೊಟ್ಟಗೇರಿ ಈ ಮೂರು ಗ್ರಾಮಗಳನ್ನೊಳಗೊಂಡ ಬಂಕಾಪುರ ಅಂತಾ ರೂಢಿಯಲ್ಲಿರುವ ಊರುಗಳನ್ನು ರೆವಿನ್ಯೂ ರೆಕಾರ್ಡ್‌ಗಳಲ್ಲಿ ಬಂಕಾಪುರ ಅಂತಾ ಬದಲಾಯಿಸಬೇಕೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಇನ್ನು ಎಷ್ಟು ದಿವಸಗಳಲ್ಲಿ ಈ ಬಗ್ಗೆ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) :–

ಅ) ಹೌದು

ಆ) ದಿನಾಂಕ 30–6–1991ರ ನಂತರ ಈ ಪ್ರಸ್ತಾವನೆಯನ್ನು ಪರಿಗಣಿಸಲಾಗುವುದು.

ಚಿಂತಾಮಣಿ ಟೌನಿನಲ್ಲಿ ಟೆಲಿಫೋನ್ ಎಕ್ಸ್‌ಚೇಂಜ್ ಕಟ್ಟಡದ ಬಗ್ಗೆ

500. ಶ್ರೀ ಬೌಡರೆಡ್ಡಿ (ಚಿಂತಾಮಣಿ) :– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?